

# ಚಾರ ಶೌರ್ಯ ಘಟಕದ ಛಲ ಬಿಡದ ಸಾಧನೆ

## ಒಂದು ತಿಂಗಳು ಸ್ವಚ್ಛತೆಗೆ ಮೀಸಲು

■ ಶೌರ್ಯ – ಸಾಹಸ

ಡಾ. ಚಂದ್ರಹಾಸ್ ಚಾರ್ಮಾಡಿ


ರಾಜ್ಯದಲ್ಲಿರುವ ಶೌರ್ಯ ತಂಡದ ಸದಸ್ಯರು ನಿತ್ಯ ಒಂದಲ್ಲೊಂದು ಸಮಾಜಮುಖಿ ಕೆಲಸಗಳಲ್ಲಿ ತೊಡಗಿರುತ್ತಾರೆ. ಎಲ್ಲೆ ಅವಘಡಗಳು ಸಂಭವಿಸಿದರೂ ಅಲ್ಲಿ ಶೌರ್ಯ ತಂಡದವರಿರುತ್ತಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಶ್ರೀ ಹೆಗ್ಗಡೆಯವರು ಹಾಕಿಕೊಟ್ಟ 'ಸಮಾಜ ಸೇವೆ' ಎಂಬ ಮಾರ್ಗದಲ್ಲಿ ನಡೆಯುವ ಪ್ರತಿಯೊಂದು ಶೌರ್ಯ ತಂಡಗಳು ತಮ್ಮದೇ ಆದ ಬೇರೆ ಬೇರೆ ಸಾಧನೆ, ಪ್ರಯತ್ನಗಳಿಂದ ಮನೆ ಮಾತಾಗಿವೆ. ಅವುಗಳನ್ನು ನಿರಂತರದ ಪ್ರತಿ ಸಂಚಿಕೆಯಲ್ಲಿ ಪರಿಚಯಿಸುವ ಕೆಲಸವನ್ನು ಮಾಡಲಾಗುತ್ತಿದೆ.

ಹೆಬ್ರಿಯ ಸರ್ಕಲ್‌ನಿಂದ–ಬೇಳಂಜೆ, ದೂಪದ ಕಟ್ಟೆಯ ಅರಣ್ಯ ಪ್ರದೇಶ, ಬೇಳಂಜೆ ಗರಡಿ ರಸ್ತೆ, ಹಾಲಿ ಕೊಡ್ಲು, ಕುಚ್ಚೂರು ರಸ್ತೆ, ಚಾರ ಬಸದಿ ರಸ್ತೆಗಳ ಇಕ್ಕೆಲಗಳು ಸಂಪೂರ್ಣ ಕಸದಿಂದ ತುಂಬಿದ್ದವು. ವಾಹನದಲ್ಲಿ ಪ್ರಯಾಣಿಸುವವರು ಪ್ಲಾಸ್ಟಿಕ್ ಚೀಲ, ಬಾಟಲ್, ತಮ್ಮ ಮನೆಯ ಎಲ್ಲಾ ತ್ಯಾಜ್ಯಗಳನ್ನು ಇಲ್ಲಿ ತಂದು ಸುರಿದ ಪರಿಣಾಮ ಪ್ರಯಾಣಿಕರು ಮೂಗು ಮುಚ್ಚಿಕೊಂಡೇ ಈ ರಸ್ತೆಗಳಲ್ಲಿ ಪ್ರಯಾಣಿಸಬೇಕಿತ್ತು.

### ಒಂದು ತಿಂಗಳ ಪ್ರಯತ್ನ

ಹೆಬ್ರಿ ತಾಲೂಕಿನ ಕುಚ್ಚೂರು ಗ್ರಾಮದ 'ಶೌರ್ಯ ವಿಪತ್ತು ನಿರ್ವಹಣಾ ಘಟಕ ಚಾರ, ಬೇಳಂಜೆ'ಯ ಸದಸ್ಯರು ಈ ರಸ್ತೆಗಳನ್ನು ಸ್ವಚ್ಛಗೊಳಿಸುವ ಪಣ ತೊಟ್ಟರು. ಶೌರ್ಯ ತಂಡದಲ್ಲಿರುವ ಲತಾ, ಚಂದ್ರನಾಯ್ಕ, ಸಂಗೀತಾ, ಸುಮಲತಾ, ಗಂಗಾರತ್ನ, ಶ್ರೀನಿವಾಸ ನಾಯ್ಕ, ಸಂತೋಷ್ ನಾಯ್ಕ, ಸತೀಶ ನಾಯ್ಕ, ಕುಮಾರ ನಾಯ್ಕ, ಮಹೇಶ ನಾಯ್ಕ, ಸಂತೊಷ ಪೂಜಾರಿ, ರಾಘವೇಂದ್ರ ಎಸ್., ಸುಬ್ರಹ್ಮಣ್ಯ, ಸುರೇಂದ್ರ ನಾಯ್ಕ, ಕೆ. ಕೃಷ್ಣ ನಾಯ್ಕ, ನಿಖಿತ್ ಕುಮಾರ್, ನಯನ ಕುಮಾರ್, ಶಶಿಕಲಾ, ರಾಘವೇಂದ್ರ, ರಾಧಿಕಾ, ಅನಿತಾ, ಸಹದೇವ್ ಹೀಗೆ 22 ಮಂದಿಯೂ ವಾಹನ ಚಾಲಕ, ಹುಲ್ಲು ಕಟಾವು, ಗಾರೆ ಕೆಲಸ, ಛಾಯಾಚಿತ್ರಗ್ರಾಹಕ, ಗೇರು ಬೀಜದ ಫ್ಯಾಕ್ಟರಿಯಲ್ಲಿ ಹೀಗೆ ಬೇರೆ ಬೇರೆ ನಿತ್ಯ ಕಸುಬನ್ನು ನಂಬಿ ಬದುಕುವವರು. ಒಂದೆರಡು ದಿನಗಳ ಕಾಲ ಕೆಲಸಕ್ಕೆ ರಜೆ ಹಾಕಿ ರಸ್ತೆಯ ಇಕ್ಕೆಲಗಳ ಕಸ ಹೆಕ್ಕಿದರೆ ಅದು ಮುಗಿಯಲಾರದು ಎಂಬ ಅರಿವು ಇವರಿಗಿತ್ತು. ಈ ನಿಟ್ಟಿನಲ್ಲಿ ಎಲ್ಲರೂ ಸೇರಿ ತಮ್ಮ ಕೆಲಸದ ಬಿಡುವಿನ ಸಮಯ ಅಂದರೆ ಸಂಜೆ ಗಂಟೆ 5.45 ರಿಂದ ಕತ್ತಲಾಗುವವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಸ್ವಚ್ಛತೆಯನ್ನು ಮಾಡುವ ನಿರ್ಧಾರ ಮಾಡಿದರು. ಅಕ್ಟೋಬರ್ 02, 2023ರ ಗಾಂಧೀಜಯಂತಿಯಂದು ಆರಂಭವಾದ ಸ್ವಚ್ಛತಾ ಕಾರ್ಯಕ್ರಮ ಬರೋಬ್ಬರಿ ಒಂದು ತಿಂಗಳುಗಳ ಕಾಲ ನಡೆಯಿತು. ಆರಂಭದಲ್ಲಿ ರಸ್ತೆ ಬದಿಯ ಕಸ ಹೆಕ್ಕುವ ಇವರ ಸಾಹಸವನ್ನು ಕಂಡು ಒಂದಷ್ಟು ಮಂದಿ ಇದೊಂದು ಹುಚ್ಚು ಸಾಹಸವೆಂದದ್ದು ಇದೆ. ಆದರೆ ಇವರು ಮಾತ್ರ ಆ ಮಾತುಗಳಿಂದ ವಿಚಲಿತರಾಗಲಿಲ್ಲ. ರಸ್ತೆಯುದ್ದಕ್ಕೂ ಸಿಗುವ 14 ಬಸ್‌ಸ್ಟ್ಯಾಂಡ್‌ಗಳನ್ನು ನೀರು ಹಾಕಿ ತೊಳೆದು ಶುಭ್ರಗೊಳಿಸಿದರು. ನಿತ್ಯ ಸಂಜೆಯಾಗುತ್ತಿದ್ದಂತೆ ರಸ್ತೆ ಬದಿ ಸ್ವಚ್ಛತಾ ಕೆಲಸಗಳಲ್ಲಿ ತೊಡಗುತ್ತಿದ್ದ ಶೌರ್ಯ ಘಟಕದ ಪ್ರಯತ್ನವನ್ನು ಕಂಡು ಪ್ರಯಾಣಿಕರು ಕಸ ಹಾಕುವುದನ್ನು ಕಡಿಮೆ ಮಾಡಿದರು.

(37ನೇ ಪುಟಕ್ಕೆ)



# ಶೌರ್ಯ ಸಾಹಸಿಗರಿಗೆ ಒಲಿದ ಜಲ

ಪ್ರತಿನಿತ್ಯ ರಾಜ್ಯದಾದ್ಯಂತ ಗ್ರಾಮಾಭಿವೃದ್ಧಿ ಯೋಜನೆಯ ಶೌರ್ಯ ಸ್ವಯಂ ಸೇವಕರು ಒಂದಲ್ಲೊಂದು ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೊಡ್ಡತೋಟ ವಲಯ ಘಟಕದ ಶೌರ್ಯ ಸ್ವಯಂ ಸೇವಕರು ಸಾರ್ವಜನಿಕ ದೇವಸ್ಥಾನದಲ್ಲಿ ಬಾವಿಯೊಂದನ್ನು ತೋಡುವ ಮೂಲಕ ಭಕ್ತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸುಳ್ಯ ಪೇಟೆಯಿಂದ ಸುಮಾರು ಇಪ್ಪತ್ತೈದು ಕಿ.ಮೀ. ದೂರದ ನೆಲ್ಲೂರು ಕೇಮ್ರಾಜೆ ಗ್ರಾಮದ ಮಂಟಮೆ ಎಂಬಲ್ಲಿ ಅಂದಾಜು ನೂರಕ್ಕೂ ಹೆಚ್ಚು ಕುಟುಂಬಗಳಿವೆ. ಗ್ರಾಮದಲ್ಲಿರುವ ರಾಜನ್‌ದೈವ ಇಲ್ಲಿನ ಜನರ ಭಕ್ತಿಯ ಕೇಂದ್ರ. ಸುಳ್ಯದಿಂದ, ಇತರೆಡೆಗಳಿಂದಲೂ ಇಲ್ಲಿಗೆ ಹರಕೆ ಹೊತ್ತು ಭಕ್ತರು ಬರುತ್ತಾರೆ. ಹರಕೆ ಹೊತ್ತು ಕೆಲವೇ ದಿನಗಳಲ್ಲಿ ಕಷ್ಟಗಳು ದೂರವಾದ ಸಾಕಷ್ಟು ಉದಾಹರಣೆಗಳು ಇಲ್ಲಿವೆ. ಪ್ರತಿವರ್ಷ ಇಲ್ಲಿ ಮೂರು ದಿನಗಳ ಕಾಲ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಸಾವಿರಾರು ಮಂದಿ ಭಕ್ತರು ಸೇರುತ್ತಾರೆ. ಪ್ರತಿ ಸಂಕ್ರಮಣದಂದು ಪೂಜೆ ನಡೆಯುತ್ತದೆ. ಆದರೆ ಹಲವಾರು ವರ್ಷಗಳಿಂದ ದೇವಸ್ಥಾನದಲ್ಲಿ ನೀರಿನ ವ್ಯವಸ್ಥೆಯಿರಲಿಲ್ಲ. ಜಾತ್ರೆಯ ದಿನಗಳಲ್ಲಿ ದೇವಾಲಯದ ಸಮಿತಿಯ ಸದಸ್ಯರು ಇಲ್ಲಿಂದ ಐವತ್ತು ಮೀಟರ್ ದೂರದಲ್ಲಿರುವ ತೋಡಿನಲ್ಲಿ ಗುಂಡಿ ತೆಗೆದು ಅಲ್ಲಿಂದ ಪೈಪ್ ಮೂಲಕ ನೀರು ತರುವ, ಅದು ಸಾಲದಾದಾಗ ಊರಿನ ಇತರರ ಮನೆಗಳಿಂದ ಪೈಪ್ ಮೂಲಕ ನೀರು ಸಂಗ್ರಹಿಸುವ ಕೆಲಸದಲ್ಲಿ ನಿರತರಾಗಬೇಕಾಗಿತ್ತು.

ಎರಡು ವರ್ಷಗಳ ಹಿಂದೆ ಸಮಿತಿಯ ಸದಸ್ಯರು ದೈವಸ್ಥಾನದ ಪಕ್ಕ ಬಾವಿ ತೋಡುವ ನಿರ್ಧಾರವನ್ನು ಮಾಡಿದರು. ಶೌರ್ಯ ತಂಡದ ಸದಸ್ಯರೂ ಸಮಿತಿಯಲ್ಲಿದ್ದರು. ತಾವೂ ಕೂಡಾ ದೈವಸ್ಥಾನದ ಬಾವಿ ತೋಡುವ ಕೆಲಸದಲ್ಲಿ ಕೈಜೋಡಿಸುವ ನಿರ್ಧಾರವನ್ನು ಮಾಡಿದರು. ಆರಂಭದ ದಿನ ಸಮಿತಿ ಸದಸ್ಯರು ಆರು ಅಡಿಯವರೆಗೆ ಬಾವಿ ತೋಡಿದರು. ಮರುದಿನ ಶೌರ್ಯ ತಂಡದ ಸಂಯೋಜಕರಾದ ವೆಂಕಟ್ರಮಣ ಡಿ.ಜಿ., ಸ್ವಯಂ ಸೇವಕರಾದ ವೇಣುಗೋಪಾಲ ಎಂ., ಅಚ್ಚುತಾ, ಚೇತನ್ 'ಎ., ಹಿತೇಶ್ ಹೀಗೆ ಐದು ಮಂದಿ ಬಾವಿ ತೋಡುವ ಕೆಲಸದಲ್ಲಿ ನಿರತರಾದರು. ಆರು ಅಡಿ ತೋಡುವಷ್ಟರಲ್ಲಿ ಜಲಧಾರೆಯಾಯಿತು.

ಕಳೆದ ಎರಡು ವರ್ಷಗಳಿಂದ ಇದುವರೆಗೆ ಬಾವಿ ಬತ್ತಿಲ್ಲ. ಇದೀಗ ಸಾರ್ವಜನಿಕ ದೈವಸ್ಥಾನದ ಭಕ್ತರ ಬಹುದಿನಗಳ ಬೇಡಿಕೆಯೊಂದು ಈಡೇರಿದಂತಾಗಿದೆ.



ಶೌರ್ಯ ತಂಡದ ಈ ಪ್ರಯತ್ನ ಮೆಚ್ಚುಗೆಗೆ ಪಾತ್ರವಾಗಿದೆ. ಈ ಹಿಂದೆ ಸುಳ್ಯ ಗ್ರಾಮದ ಪೈಲಾರಿನಿಂದ ಕುಕ್ಕುಜಡ್ಕಕ್ಕೆ ಹೋಗುವ ಸೇತುವೆ ಪ್ರವಾಹಕ್ಕೆ ಸಿಲುಕಿ ಸಂಪರ್ಕ ಕಡಿದಾಗ ಶೌರ್ಯ ತಂಡದ ಸ್ವಯಂಸೇವಕರು ಕಂಗಿನ ತಾತ್ಕಾಲಿಕ ಸೇತುವೆಯನ್ನು ನಿರ್ಮಿಸಿಕೊಡುವ ಮೂಲಕ ಊರಿನ ನೂರಾರು ಮಂದಿಗೆ, ಶಾಲಾ ಮಕ್ಕಳಿಗೆ ನೆರವಾಗಿರುವುದನ್ನು ಗ್ರಾಮಸ್ಥರು ನೆನಪಿಸಿಕೊಳ್ಳುತ್ತಿದ್ದಾರೆ. ಇದೀಗ ದೊಡ್ಡತೋಟ ವಲಯ ಘಟಕದಲ್ಲಿ ಹದಿನೇಳು ಮಂದಿ ಸ್ವಯಂಸೇವಕರಿದ್ದು ತಮ್ಮ ಕೈಲಾದ ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ. ರಾಜ್ಯದಾದ್ಯಂತ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಶೌರ್ಯ ಸಾಹಸಿಗರು ಮಾಡುತ್ತಿರುವ ಕೆಲಸ ಸಮಾಜಸೇವೆಯಲ್ಲಿ ತೊಡಗಬೇಕೆಂದುಕೊಂಡ ಇತರರಿಗೆ ಮಾದರಿಯಾದುದು.

End